ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

10

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 6/11/20

# 11 ರಾಜ್ಯಗಳಲ್ಲಿ ಮತ ಸಂಭ್ರಮ

## 10 ರಾಜ್ಯಗಳಲ್ಲಿ ಉಪಚುನಾವಣೆ | ಬಿಹಾರದಲ್ಲಿ 2ನೇ ಹಂತದ ಮತದಾನ ಪೂರ್ಣ







ಹಕ್ಕು ಚಲಾಯಿಸಿದ ಬಳಿಕ ಬಿಹಾರ ಸಿಎಂ ನಿತೀಶ್ ಕುಮಾರ್, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಎಲ್‌ಜೆಪಿ ಮುಖಂಡ ಚಿರಾಗ್ ಪಾಸ್ವಾನ್ ಬೆರಳಿಗೆ ಹಾಕಿರುವ ಶಾಯಿ ಪ್ರದರ್ಶಿಸಿದರು.

ಪಾಟ್ನಾ: ಪ್ರಧಾನಿ ನರೇಂದ್ರ ಮೋದಿ, ಸಿಎಂ ನಿತೀಶ್ ಕುಮಾರ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್‌ರಂತಹ ಘಟಾನುಘಟಿಗಳ ಹೈವೋಲ್ಟೇಜ್ ಪ್ರಚಾರವನ್ನು ಕಂಡ ಬಿಹಾರದಲ್ಲಿ 94 ಕ್ಷೇತ್ರಗಳಿಗೆ ಮಂಗಳವಾರ ನಡೆದ 2ನೇ ಹಂತದ ಮತದಾನ ಶಾಂತಿಯುತವಾಗಿ ಪೂರ್ಣಗೊಂಡಿದೆ.

17 ಜಿಲ್ಲೆಗಳ 94 ಕ್ಷೇತ್ರಗಳಿಗೆ ನಡೆದ ಮತದಾನದಲ್ಲಿ 2.85 ಕೋಟಿಗೂ ಅಧಿಕ ಮತದಾರರು 1,463 ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಿದ್ದಾರೆ. 2ನೇ ಹಂತದಲ್ಲಿ ಸಂಜೆ 6ರವರೆಗೆ ಶೇ.53.51 ರಷ್ಟು ಮತದಾನ ದಾಖಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ರಾಜ್ಯಪಾಲ ಫಗು ಚೌಹಾಣ್, ಸಿಎಂ ನಿತೀಶ್ ಕುಮಾರ್, ಡಿಸಿಎಂ ಸುಶೀಲ್ ಮೋದಿ, ತೇಜಸ್ವಿ ಯಾದವ್, ಚಿರಾಗ್ ಪಾಸ್ವಾನ್, ಕೇಂದ್ರ ಸಚಿವ ಅಶ್ವಿನಿ ಕುಮಾರ್ ಚೌಬೆ ಸೇರಿದಂತೆ ಪ್ರಮುಖರು ಹಕ್ಕು ಚಲಾವಣೆ ಮಾಡಿದ್ದಾರೆ. ಮತದಾನದ ಬಳಿಕ ಸಿಎಂ ನಿತೀಶ್ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಲು ನಿರಾಕರಿಸಿದರು. ಆದರೆ, ತೇಜಸ್ವಿ ಯಾದವ್ ಮಾತನಾಡಿ, ಈ ಸರ್ಕಾರದ ಬಗ್ಗೆ ಜನರು ಆಕ್ರೋಶಗೊಂಡಿದ್ದಾರೆ. ಅವರು ಖಂಡಿತಾ ಶಿಕ್ಷಣ, ಆರೋಗ್ಯ, ನೀರಾವರಿ ಮತ್ತು ಕಾನೂನು ಸುವ್ಯವಸ್ಥೆಗಾಗಿ ಮತ ಚಲಾಯಿಸುತ್ತಾರೆ ಎಂದು ಹೇಳಿದರು.

**ನಿತೀಶ್ ರ್ಯಾಲಿ ವೇಳೆ ಈರುಳ್ಳಿ ಎಸೆತ!:** ಈ ನಡುವೆ, ಮಂಗಳವಾರ ನಿತೀಶ್ ಅವರು ಮಧುಬನಿಯಲ್ಲಿ ಚುನಾವಣಾ ರ್ಯಾಲಿ ನಡೆಸುತ್ತಿದ್ದಾಗ ಕಿಡಿಗೇಡಿಗಳು ಈರುಳ್ಳಿ ಹಾಗೂ ಕಲ್ಲುಗಳನ್ನು ಎಸೆದ ಘಟನೆ ನಡೆದಿದೆ. ಆದರೂ ತಮ್ಮ ಭಾಷಣ ಮುಂದುವರಿಸಿದ ನಿತೀಶ್, 'ಎಸೆಯುವುದನ್ನು ಮುಂದುವರಿಸಿ' ಎಂದು ಹೇಳಿದ್ದಾರೆ. ನಿತೀಶ್‌ರನ್ನು ಭದ್ರತಾ ಸಿಬ್ಬಂದಿ ಸುತ್ತುವರಿದು, ಅವರ ಮೇಲೆ ಈರುಳ್ಳಿ ಬೀಳದಂತೆ ನೋಡಿಕೊಂಡರು.

## ಕಾಂಗ್ರೆಸ್‌ಗೆ ಜನ ಸರಿಯಾಗಿ ಶಿಕ್ಷಿಸಿದ್ದಾರೆ: ಪ್ರಧಾನಿ ಮೋದಿ

ಸಂಸತ್‌ನ ಎರಡೂ ಸದನಗಳಲ್ಲಿ ಕಾಂಗ್ರೆಸ್‌ನ ಸಂಖ್ಯಾಬಲ ಕುಗ್ಗಿರುವುದನ್ನು ಲೇವಡಿ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, 'ಬಡತನ ನಿರ್ಮೂಲನೆ, ಕೃಷಿ ಸಾಲ ಮನ್ನಾದಂತಹ ಸುಳ್ಳು ಆಶ್ವಾಸನೆ ನೀಡಿದ ಕಾಂಗ್ರೆಸ್‌ಗೆ ಜನರು ಸರಿಯಾಗಿಯೇ ಶಿಕ್ಷೆ ನೀಡಿದ್ದಾರೆ' ಎಂದು ಹೇಳಿದ್ದಾರೆ. ಬಿಹಾರದಲ್ಲಿ 2ನೇ ಹಂತದ ಮತದಾನದ ದಿನವಾದ ಮಂಗಳವಾರ ಸರಣಿ ರ್ಯಾಲಿಗಳನ್ನು ನಡೆಸಿದ ಮೋದಿ, ಪ್ರತಿಪಕ್ಷಗಳ ವಿರುದ್ಧ ವಾಗ್ದಾಳಿ ಮುಂದುವರಿಸಿದ್ದಾರೆ. 'ಕಾಂಗ್ರೆಸ್ ನ ಸುಳ್ಳು ಆಶ್ವಾಸನೆಗಳಿಂದ ಜನ ರೋಸಿಹೋಗಿದ್ದಾರೆ. ಹೀಗಾಗಿ ಈಗ ಅವಕಾಶ ಸಿಕ್ಕಾಗಲೆಲ್ಲ ಜನರು ಆ ಪಕ್ಷವನ್ನು ಶಿಕ್ಷಿಸುತ್ತಿದ್ದಾರೆ. ಜನಾಕ್ರೋಶವು ಕಾಂಗ್ರೆಸ್ ಅನ್ನು ಎಲ್ಲಿಗೆ ತಂದು ನಿಲ್ಲಿಸಿದೆಯೆಂದರೆ, ಈಗ ಸಂಸತ್‌ನ ಎರಡೂ ಸದನಗಳಲ್ಲೂ 100ಕ್ಕಿಂತ ಕಡಿಮೆ ಸಂಸದರನ್ನು ಆ ಪಕ್ಷ ಹೊಂದುವಂತಾಗಿದೆ' ಎಂದು ಮೋದಿ ವ್ಯಂಗ್ಯವಾಡಿದ್ದಾರೆ. ಇದೇ ವೇಳೆ, ಮಹಾಘಟಬಂಧನ್ ವಿರುದ್ಧವೂ ಕಿಡಿಕಾರಿದ ಅವರು, 'ನೀವು 'ಭಾರತ್ ಮಾತಾ ಕೀ ಜೈ' ಎಂದಾಗಲೀ, 'ಜೈ ಶ್ರೀ ರಾಮ್' ಎಂದಾಗಲೀ ಘೋಷಣೆ ಕೂಗದಂತೆ ಬಿಹಾರದಲ್ಲಿ ಜಂಗಲ್ ರಾಜ್ ತಂದಂಥ ಕಾಂಗ್ರೆಸ್-ಆರ್‌ಜೆಡಿ ಪಕ್ಷಗಳು ತಡೆಯುತ್ತವೆ. ಅಂಥವರು ಈಗ ನಿಮ್ಮ ಬಳಿ ಮತ ಕೇಳಿಕೊಂಡು ಬಂದಿದ್ದಾರೆ' ಎಂದೂ ಟೀಕಿಸಿದ್ದಾರೆ.

## ಮೋದಿ, ನಿತೀಶ್ ಬಿಹಾರವನ್ನು ಲೂಟಿ ಮಾಡಿದ್ದಾರೆ: ರಾಹುಲ್

'ಪ್ರಧಾನಿ ಮೋದಿ, ಸಿಎಂ ನಿತೀಶ್ ಕುಮಾರ್ ಬಿಹಾರವನ್ನು ಲೂಟಿ ಮಾಡಿದ್ದಾರೆ. ಇದು ರಾಜ್ಯದ ಯುವಜನರಿಗೆ ಗೊತ್ತಿದೆ. ಹೀಗಾಗಿಯೇ ಅವರನ್ನು ಅಧಿಕಾರದಿಂದ ಒದ್ದೋಡಿಸಲು ಜನ ನಿರ್ಧರಿಸಿದ್ದಾರೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಕತಿಹಾರ್‌ನಲ್ಲಿ ಚುನಾವಣಾ ರ್ಯಾಲಿ ನಡೆಸಿ ಮಾತನಾಡಿದ ಅವರು, 'ಕೊರೊನಾ ಲಾಕ್ ಡೌನ್ ಅವಧಿಯಲ್ಲಿ ಕಾರ್ಮಿಕರು ಸಾವಿರಾರು ಕಿ.ಮೀ.ವರೆಗೆ ಕಾಲ್ನಡಿಗೆಯಲ್ಲೇ ಸಾಗಿದ್ದರೆ, ಮೋದಿಯಾಗಲೀ, ನಿತೀಶ್ ಆಗಲೀ ಅವರ ನೆರವಿಗೆ ಬರಲಿಲ್ಲ. ಆದರೆ, ಕಾಂಗ್ರೆಸ್ ಪಕ್ಷವು ವಲಸೆ ಕಾರ್ಮಿಕರನ್ನು ಊರು ತಲುಪಿಸಲು ಬಸ್‌ಗಳ ವ್ಯವಸ್ಥೆ ಮಾಡಿತು. ನಾವು ಅಧಿಕಾರದಲ್ಲಿಲ್ಲ, ಇದ್ದಿದ್ದರೆ ಲಕ್ಷಾಂತರ ಮಂದಿಗೆ ನೆರವಾಗುತ್ತಿದ್ದೆವು. ಆದರೂ ನಮ್ಮ ಕೈಲಾದಷ್ಟು ಸಹಾಯ ಮಾಡಿದ್ದೇವೆ' ಎಂದಿದ್ದಾರೆ.

## ಉಪಚುನಾವಣೆ: 10 ರಾಜ್ಯಗಳ 54 ಕ್ಷೇತ್ರಗಳಲ್ಲಿ ಮತದಾನ ಪೂರ್ಣ

**ಕೊರೊನಾ** ಭೀತಿಯ ನಡುವೆಯೂ ಮಂಗಳವಾರ ಕರ್ನಾಟಕ ಸೇರಿದಂತೆ 10 ರಾಜ್ಯಗಳ 54 ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆದಿದೆ. ಈ ಪೈಕಿ ಮಧ್ಯಪ್ರದೇಶದ 28 ಕ್ಷೇತ್ರಗಳೂ ಸೇರಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಭಾರೀ ಪೈಪೋಟಿ ಏರ್ಪಟ್ಟಿದೆ. ಕೊರೊನಾ ಮಾರ್ಗಸೂಚಿಯನ್ವಯ ಹಕ್ಕು ಚಲಾವಣೆ ನಡೆದಿದ್ದು, ನ.10ರಂದು ಫಲಿತಾಂಶ ಪ್ರಕಟವಾಗಲಿದೆ. ಉತ್ತರಪ್ರದೇಶ, ಹರ್ಯಾಣ, ಗುಜರಾತ್, ಛತ್ತೀಸ್‌ಗಢ, ತೆಲಂಗಾಣ, ಒಡಿಶಾ, ನಾಗಾಲ್ಯಾಂಡ್, ಜಾರ್ಖಂಡ್‌ನಲ್ಲೂ ಉಪಚುನಾವಣೆ ಮತದಾನ ನಡೆದಿದೆ.